## "ವಚನಕಾರರ ಚಳುವಳಿ, ಭಾಷಾ ಚಳುವಳಿಯ ಒಂದು ಮಾದರಿ" – ಡಾ. ಬಾಳಣ್ಣ ಶೀಗೀಹಳ್ಳಿ



ಧಾರವಾಡ : ಸಮಾಜಮುಖಿ ಮತ್ತು ಸಮಾನತೆ ಚಿಂತನೆಗಳನ್ನು ಬಿತ್ತಿದ ೧೨ ನೇ ಶತಮಾನದ ವಚನಕಾರರ ಚಳುವಳಿ, ಕನ್ನಡ ಭಾಷೆ ಮತ್ತು ಕನ್ನಡ ನಾಡಿನ ಭಾಷಾ ಸ್ವರೂಪ, ಭಾಷಾ ಸಾಮರ್ಥ್ಯ ಮತ್ತು ಭಾಷಾ ತೀವ್ರತೆಯನ್ನು ಬದಲಾಯಿಸಿದ ಮೊದಲ ಕನ್ನಡ ಭಾಷಾ ಚಳುವಳಿ ಎಂದು ಕನ್ನಡದ ಪ್ರಸಿದ್ಧ ವಿದ್ವಾಂಸರಾದ ಪ್ರೊ. ಬಾಳಣ್ಣಾ ಶೀಗೀಹಳ್ಳಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀ ಎಂ.ಟಿ., ಎ.ಟಿ., ಬಿ.ಟಿ., ಮತ್ತು ಎಚ್.ಟಿ. ಸಹೋದರರ ಸ್ಮರಣಾರ್ಥ ದಿನಾಂಕ ೯–೧೦–೨೦೧೮ ರಂದು ಆಯೋಜಿಸಿದ್ದ ಕನ್ನಡ ಭಾಷಾ ಚಳುವಳಿಗಳು ಎಂಬ ವಿಷಯ ಕುರಿತು ವಿಶೇಷ ವ್ಯಾಖ್ಯಾನ ಮಾಲೆ–೨೨ರಲ್ಲಿ ಉಪನ್ಯಾಸ ನೀಡುತ್ತಾ ಡಾ. ಬಾಳಣ್ಣಾ ಶೀಗೀಹಳ್ಳಿ ಅವರು ಭಾಷೆಯ ಅಸ್ತಿತ್ವ, ವಿಮೋಚನೆ, ಬೆಳವಣಿಗೆ, ಅಭಿವೃದ್ಧಿ ಮತ್ತು ಸಂಕಷ್ಟಗಳು ಬಂದಾಗ ಮತ್ತೆ ಮತ್ತೆ ಭಾಷಾ ಚಳುವಳಿ, ಸಂಘರ್ಷ ಹಾಗೂ ಹೋರಾಟ ಅನಿವಾರ್ಯವೆಂದು ಮತ್ತು ಇದು ಜನತೆಯ ಸ್ವಾಭಿಮಾನದ ಕೂಗು ಎಂದು ಮುಂದುವರೆದು ಮಾತನಾಡುತ್ತಾ ಅವರು ಹೇಳಿದರು.

ಒಂದು ಭಾಷೆ ನಾಶವಾದರೆ ಒಂದು ಜನಾಂಗ ನಾಶವಾದಂತೆ. ಒಂದು ಜನಾಂಗವನ್ನು ಸಂಸ್ಕೃತಿ, ಸಂಸ್ಕಾರ, ವ್ಯವಹಾರಗಳನ್ನು ನಾಶ ಪಡಿಸಬೇಕು ಅಂದರೆ ಯಾವುದೇ ಶಸ್ತ್ರಗಳು ಬೇಕಾಗಿಲ್ಲ. ಆ ಜನಾಂಗದ ಭಾಷೆ ನಾಶ ಮಾಡಿದರೆ ಸಾಕು ಎಂದರು. ಚಳುವಳಿಗಳ ವಿಧಾನಗಳಲ್ಲಿ ಕ್ರಾಂತಿಕಾರಿ, ಸುಧಾರಣಾವಾದಿ, ಪ್ರತಿರೋಧಕ ಹಾಗೂ ಉಟೋಪಿಯನ್ ಚಳುವಳಿಗಳನ್ನು ಕುರಿತು ವಿವರವಾಗಿ ಚರ್ಚಿಸಿದರು. ಅನ್ಯ ಭಾಷೆಗಳ ಆಕ್ರಮಣ ಕನ್ನಡಿಗರ ಮೇಲೆ ತೀವ್ರವಾಗಿ ಆಗಿರುವುದರಿಂದ ಏಕೀಕರಣ ಚಳುವಳಿಯ ನಂತರವೂ ತಲ್ಲಣಗೊಂಡಿದ್ದೇವೆ.

ಏಕೀಕರಣದ ನಂತರ ಸಮಾನ ಹಕ್ಕುಗಳು,ಸಮಾನತೆ ಇರುತ್ತೆ ಅಂದುಕೊಂಡಿದ್ದು ಸುಳ್ಳಾಗಿದೆ. ಇಂದಿಗೂ ಉತ್ತರ ಕರ್ನಾಟಕದವರು ತುಳಿತಕ್ಕೆ ಒಳಗಾಗಿದ್ದೇವೆ ಎಂದರು.

ಅಧ್ಯಕ್ಷತೆ ವಹಿಸಿ, ಕ.ವಿ.ವ. ಸಂಘದ ಗೌರವ ಉಪಾಧ್ಯಕ್ಷರು ಹಾಗೂ ಹುಬ್ಬಳ್ಳಿಯ ಮಾಜಿ ಸಂಸದರಾದ ಪ್ರೊ. ಆರ್. ಜಿ. ಸನದಿ ಅವರು ಮಾತನಾಡಿ, ಚಳುವಳಿಗಳನ್ನು ಮಾಡಬೇಕು ಅಂದ್ರೆ ಬೆಂಕಿಯನ್ನು ಹಚ್ಚಬೇಕಿಲ್ಲ. ದೀಪ ಹಚ್ಚುವುದರಿಂದಲೂ ಮಾಡಬಹುದ. ಕನ್ನಡ ಬದುಕಿದ್ದು ಹಳ್ಳಿಗಳಿಂದ. ಜಾತಿ, ಮತ, ಬಡವ ಶ್ರೀಮಂತ ಭಿನ್ನ ಮರೆತು ಭಾಷೆಯನ್ನು ಶ್ರೀಮತಿ ಮತ್ತು ಪರಿಪೂರ್ಣಗೊಳಿಸಿದ್ದಾರೆ ಎಂದರು.

ನಾಡೋಜ. ಡಾ. ಪಾಪು ಅವರು ಮಾತನಾಡಿ, ಗುಂಡುರಾಯರು ಆ ಹೊತ್ತಿಗೆ ಮುಖ್ಯಮಂತ್ರಿಗಳಾಗಿರದೇ ಹೋಗಿದ್ದರೆ, ಗೋಕಾಕ ಚಳುವಳಿ ಫಲಕಾರಿ ಆಗುತ್ತಿರಲಿಲ್ಲವೆಂದರು.

ವೇದಿಕೆ ಮೇಲೆ ದತ್ತಿ ದಾನಿಗಳಾದ ಡಾ. ಅಶೋಕ ಸಾಸನೂರ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಗೌರವ ಉಪಾಧ್ಯಕ್ಷರಾದ ಬಿ.ಎಲ್. ಪಾಟೀಲ, ಸೇತುರಾಮ ಹುನಗುಂದ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಶಾಂತೇಶ ಗಾಮನಗಟ್ಟಿ, ಹಾಗೂ ಲೋಹಿತ ನಾಯ್ಕರ, ಜಕ್ಕಪ್ಪನವರ, ಪ್ರಮೀಳಾ ಜಕ್ಕಣ್ಣವರ, ಮಹಾಂತೇಶ ನರೇಗಲ್, ಬಿ.ಕೆ. ಹೊಂಗಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ವರದಿ : ವಿಶ್ವೇಶ್ವರಿ ಬ. ಹಿರೇಮಠ**

ಕಾರ್ಯಕಾರಿ ಸಮಿತಿ ಸದಸ್ಯರು

ಮೊ: ೮೩೧೭೪೧೬೬೫೪